

# ಮೊಟ್ಟೆ ಹಣ್ಣು

■ ಚಿತ್ರ ಬರಹ:
ಸಹನಾ ಕಾಂತಬೈಲು





**ಕೊ**ಡಗಿನ ಚೆಟ್ಟಳ್ಳಿಯ ಕೇಂದ್ರೀಯ ತೋಟಗಾರಿಕ ಪ್ರಾಯೋಗಿಕಾ ಕೇಂದ್ರದಲ್ಲಿ ವಿವಿಧ ಪ್ರದೇಶಗಳಿಂದ ಸಂಗ್ರಹಿಸಲಾದ ಹಲವು ಹಣ್ಣುಗಳ ಗಿಡಗಳನ್ನು ಬೆಳೆಸಲಾಗಿದೆ. ಅವುಗಳಲ್ಲಿ ಹಳದಿ ಚೆಂಡನ್ನು ಪೋಣಿಸಿದಂತೆ ಹಣ್ಣುಗಳಿಂದ ತೊನೆದಾಡುವ ಮರ ಗಮನ ಸೆಳೆಯುವಂಥದು.

ಮರಕ್ಕೆ ಮುಸುಂಬಿ ಗಾತ್ರದ ಹಣ್ಣುಗಳಿರುತ್ತವೆ. ಸುಲಿದರೆ ಹೋಳಿಗೆ ಬಣ್ಣದ ಹಿಟ್ಟಿನಂತಹ ತಿರುಳು. ಒಳಗೆ ಒಂದೇ ಒಂದು ಸುಲಿದ ಅಡಿಕೆ ಗಾತ್ರದ ಬೀಜ. ತಿರುಳನ್ನು ಬಾಯಿಗೆ ಹಾಕಿಕೊಂಡರೆ ತುಂಬ ಸಿಹಿ ಮತ್ತು ಉತ್ತಮ ಸ್ವಾದ.

ಇದು ಉಷ್ಣವಲಯದಲ್ಲಿ ಬೆಳೆಯುವ ಹಣ್ಣು. ಇದನ್ನು ಮೊಟ್ಟೆ ಹಣ್ಣು ಎಂದು ಕರೆಯುತ್ತಾರೆ. ಒಳಗಿರುವ ತಿರುಳು ಮೊಟ್ಟೆಯೊಳಗಿನ ಹಳದಿಯಂತೆ ಇರುವುದರಿಂದ ಅದೇ ಹೆಸರು ಬಂದಿದೆ. ಇಂಗ್ಲಿಷ್‌ನಲ್ಲಿ ಇದನ್ನು 'ಎಗ್‌ಫ್ರೂಟ್' ಎನ್ನುತ್ತಾರೆ. ಇದರ ವೈಜ್ಞಾನಿಕ ಹೆಸರು ಪೌಟೇರಿಯಾ ಕಂಪೆಚಿಯಾನ.

ಮೊಟ್ಟೆ ಹಣ್ಣಿನ ಮೂಲ ಅಮೆರಿಕ. ನಮ್ಮ ದೇಶಕ್ಕೆ ಬಹಳ ಹಿಂದೆಯೇ ಪರಿಚಿತವಾಗಿದೆ. ಕರ್ನಾಟಕದಲ್ಲಿ ಅಲ್ಲಲ್ಲಿ ಇದರ ಬೆಳೆ ಇದೆಯಾದರೂ ಉತ್ಪಾದನೆ ಪ್ರಮಾಣ ಕಡಿಮೆ ಆದಕಾರಣ ಮಾರುಕಟ್ಟೆಯಲ್ಲಿ ಕಂಡುಬರುವುದಿಲ್ಲ. ಇದು ಆರೋಗ್ಯಕ್ಕೆ ಬಹಳ ಉತ್ತಮವಾದ ಹಣ್ಣು. ಹೆಸರೇ ಹೇಳುವಂತೆ ಮೊಟ್ಟೆಯ ಸತ್ವವನ್ನು ಸಂಪೂರ್ಣವಾಗಿ ಒಳಗೊಂಡಿದೆ. ಇದರಲ್ಲಿ ಕ್ಯಾರೋಟಿನ್, ವಿಟಮಿನ್ ಎ ಮತ್ತು ಸಿ ಹಾಗೂ ಪ್ರೊಟೀನ್ ಇದೆ. ಸ್ವಾದಿಷ್ಟವಾದ ಈ ಹಣ್ಣನ್ನು ಹಾಗೆಯೇ ತಿನ್ನಬಹುದು. ಮಿಲ್ಕ್ ಶೇಕ್, ಐಸ್‌ಕ್ರೀಂ ಕೂಡ ತಯಾರಿಸಬಹುದು.

ಈ ಸಸ್ಯ ಹೆಚ್ಚು ನೀರು, ಗೊಬ್ಬರ ಬೇಡುವುದಿಲ್ಲ. ರೋಗ ಬಾಧೆ ಕಡಿಮೆ. ತೆಂಗು, ಅಡಿಕೆ ತೋಟಗಳ ನಡುವೆ ಮಿಶ್ರ ಬೆಳೆಯಾಗಿ ಸಮೃದ್ಧವಾಗಬಲ್ಲುದು. ಮಧ್ಯಮ ಗಾತ್ರದ ಮರ. ಹಿತ್ತಲು, ಬೇಲಿ ಸಾಲಿನಲ್ಲೂ ನೆಟ್ಟು ಬೆಳೆಸಲಡ್ಡಿಯಿಲ್ಲ. ಬೀಜದಿಂದ ಗಿಡ ತಯಾರಿಸುವುದು ಸುಲಭ. ಕಸಿ ವಿಧಾನದಿಂದಲೂ ಸಸ್ಯಾಭಿವೃದ್ಧಿ ಮಾಡಬಹುದು. ಗಿಡ ನೆಟ್ಟ ಐದಾರು ವರ್ಷಗಳಲ್ಲಿ ಇಳುವರಿ ಪ್ರಾರಂಭ.

ಸಾಮಾನ್ಯವಾಗಿ ಡಿಸೆಂಬರ್–ಜನವರಿ ತಿಂಗಳಲ್ಲಿ ಹೂ ಬಿಡುತ್ತದೆ. ಮಾರ್ಚ್ ತಿಂಗಳಿಂದ ಮೇವರೆಗೆ ಮೊಟ್ಟೆ ಹಣ್ಣಿನ ಸೀಸನ್. ಎಳೆಯದಿರುವಾಗ ಕಾಯಿಯು ಹಸಿರು ಬಣ್ಣ ಹೊಂದಿದ್ದರೆ, ಪಕ್ವವಾದಾಗ ಹಳದಿ ಬಣ್ಣಕ್ಕೆ ತಿರುಗುತ್ತದೆ. ಹಣ್ಣಿನ ಹೊರಗಿನ ಸಿಪ್ಪೆ ಬಲು ತೆಳ್ಳಗಾಗಿರುವುದರಿಂದ ಒಳ್ಳೆ ಹಣ್ಣಾದಾಗ ಒಡೆಯುತ್ತದೆ. ಆದ್ದರಿಂದ ಬಣ್ಣ ಬದಲಾಗುತ್ತಿರುವಾಗಲೇ ಕೊಯ್ಲು ಮಾಡಬೇಕು. ಒಂದು ಅವಧಿಯಲ್ಲಿ ಒಂದು ಮರದಲ್ಲಿ 200ಕ್ಕಿಂತ ಹೆಚ್ಚು ಹಣ್ಣುಗಳು ಸಿಗುತ್ತವೆ. ಶ್ರಮವಿಲ್ಲದೆ ಹತ್ತಾರು ವರ್ಷ ಬದುಕಿ ಹಣ್ಣು ಕೊಡುವ ಮೊಟ್ಟೆ ಹಣ್ಣಿನ ಮರವನ್ನು ದೊಡ್ಡ ಪ್ರಮಾಣದಲ್ಲಿ ಬೆಳೆದು ಮಾರುಕಟ್ಟೆ ಕಂಡುಕೊಳ್ಳಲು ರೈತರು ಮುಂದಾಗಬೇಕಾಗಿದೆ.